ಸೂಲಗಿತ್ತಿ ನೀಲಾವತಿಯ ಬಸಿರು ಕಳೆದಳು. ಸೂರ್ಯಚಂದ್ರರ ಬೆಳಕಿನಂತೆ ಗಂಡು ಮಗು ಜನನವಾಯಿತು. ಅದಕ್ಕೆ ಜಂಗುಮಯ್ಯನೇ ಭದ್ರಗೊಮಾರ ಅಂದು ಹೆಸರು ಕರೆದ. ನೀಲಾವತಿ ಅದೇ ಜಂಗುಮಯ್ಯನ ಗುಡಿಸಲಲ್ಲಿ ಭದ್ರಗೊಮಾರನನ್ನು ಸಾಕಿ ಸಲುವಿಕೊಂಡು ಇದ್ದುಬಿಟ್ಟಳು.

ಇತ್ತ ಕಡೆ ಚಂದ್ರಶೇಖರ ಮಹಾರಾಜನು ಮಂತ್ರಿಪ್ರಧಾನಿಯನ್ನು ಕರೆದು, ಅಪ್ಪಾ ನನಗೆ ರಾಣಿಯಾಗಿದ್ದವಳು ಆತುರದಲ್ಲಿ ಪಂಥ ಕಟ್ಟಿ ಸೋತು ವನವಾಸದ ಪಾಲಾಗಿಬಿಟ್ಲು. ಬೇಡ ಕಣೆ ಅಂತಂದ್ರೂ ಕೇಳಲಿಲ್ಲ, ಈಗೇನು ಮಾಡಾನ ಅಂತಂದ. ಮಂತ್ರಿ ಅಯ್ಯೊ ಮಹಾಸ್ವಾಮಿ, ವನವಾಸ ಹೋದಂಥಾ ಗಂಡಸೇ ಬದುಕುವಂತಿಲ್ಲ, ಇನ್ನು ಒಂಟಿ ಹೆಂಗಸು ಬದುಕುವುದುಂಟೇ? ಮಹಾರಾಣಿಯವರನ್ನು ಮರೆತುಬಿಡುವುದೇ ಒಳ್ಳೆಯದು ಸ್ವಾಮಿ. ಆದರೆ ನೀವು ಬಂಜೆ ದೊರೆಯಾಗಿ ಪಟ್ಟದ ಮೇಲೆ ಕೂರಬಾರದು. ಇನ್ನೊಂದು ಲಗ್ನ ಆಗಬೇಕು, ಸಂತಾನಫಲ ಮುಂದಾಗಬೇಕು. ಇಲ್ಲದೇ ಇದ್ದರೆ ನಿಮ್ಮ ಮುಂದಿನ ಪಟ್ಟ ಯಾರದು ಸ್ವಾಮಿ, ಅದು ಕಂಡವರ ಪಾಲಾಗುವುದಿಲ್ಲವೇ ಅಂದುಬಿಟ್ಟ. ರಾಜನಿಗೆ ಮಂತ್ರಿಯು ಹೇಳುತ್ತಿರುವ ಮಾತು ಸರಿಯೇ ಸರಿ ಅನಿಸಿಬಿಟ್ಟಿತು. ಆಗಿಂದಾಗಲೇ ದೇಶಕೋಶದ ಮೇಲೆ ರಾಯಸದವರನ್ನು ಕಳುಹಿಸಿ ಕನ್ನೆಯನ್ನು ಹುಡುಕಿಸಿ ತಂದು ಲಗ್ನ ಆಗಿಬಿಟ್ಟ.

ದಿನಾ ತುಂಬುತ್ತಿದ್ದಂತೆಯೇ ಎರಡನೇ ರಾಣಿಯಾಗಿ ಬಂದವಳಿಗೆ ಅವಳಿ ಜವಳಿ ಗಂಡುಮಕ್ಕಳಾಗಿಬಿಟ್ಟವು. ಅರಮನೆಯಲ್ಲೇನು, ಕೈಗೊಬ್ಬಳು ದಾಸಿ, ಕಾಲಿಗೊಬ್ಬಳು ದಾಸಿಯರು. ಆ ಅವಳಿ ಜವಳಿ ಮಕ್ಕಳನ್ನು ಕಣ್ಣೇಕಣ್ಣಾಗಿ ಬೆಳೆಸಿದರು. ಹೆಸರೆಂದರೆ ಒಬ್ಬ ರುದ್ರಗೊಮಾರ, ಇನ್ನೊಬ್ಬ ರೈತಗೊಮಾರ. ಮಕ್ಕಳು ನಡಿಯುವಂಗೆ ಆಗುತ್ತಲೂ ಚಂದ್ರಶೇಖರ ಮಹಾರಾಜನು ಓದುವ ಮಠಕ್ಕೆ ಹಾಕಿಬಿಟ್ಟ. ಮಠಕ್ಕೆ ಹೋಗುತ್ತ ಬರುತ್ತ ಮಕ್ಕಳು ಪ್ರಾಯಸಮರ್ಥವಾಗಿ ಬೆಳೆಯುತ್ತಿದ್ದರು.

ಒಂದು ದಿನ ಚಂದ್ರಶೇಖರ ಮಹಾರಾಜನು ಚಿನ್ನದ ಕಟ್ಟಿನ ಮಂಚದ ಮೇಲೆ ಮುಹೂರ್ತವಾಗಿ ಮಲಗಿರಬೇಕಾದರೆ ಒಂದು ಕನಸು ಕಂಡನು. ಕಂಡದ್ದೇನು ಅಂದರೆ ಅಲ್ಲೊಂದು ವೃಕ್ಷ. ಆ ವೃಕ್ಷದ ಸಂಪತ್ತು ಏನಪ್ಪ ಅಂದರೆ ಅದರದು ಮುತ್ತಿನಬುಡ, ಚಿನ್ನದ ನಡು, ಪಚ್ಚೆ ತೆನೆ. ರಾಜ ದಡಕ್ಕಂತ ಎಚ್ಚರವಾಗಿ ಆಹಾ ಸಪ್ನದಲ್ಲಿ ಕಂಡ ವೃಕ್ಷ ಆ ಥರ ಇತ್ತಲ್ಲ. ಇನ್ನು ನಿಜವಾಗಲೂ ಕಂಡರೆ ಇನ್ನೆಷ್ಟು ಆನಂದಮಯವಾಗಿರಬಹುದು. ಅದನ್ನು ಕಾಣಬೇಕು ಅಂತ ಆಸೆಪಟ್ಟ. ಆಗಿಂದ ಆಗಲೇ ಪಟ್ಟಣವೆಲ್ಲ ಡಂಗೂರ ಹೊಡೆಸಿದ. ಮುತ್ತಿನ ಬುಡ, ಚಿನ್ನದ ನಡು, ಪಚ್ಚೆ ತೆನೆ ಇರತಕ್ಕಂಥ ವೃಕ್ಷವನ್ನು ತಂದುಕೊಟ್ಟವರಿಗೆ ಆನೆ ಮೇಲೆ ಕುಂಡಿರ್ಸಿ ಮೆರವಣಿಗೆ ಮಾಡಸ್ತೀನಿ, ಬೇಕಾದಂತೆ ಬಹುಮಾನ ಕೊಡುಸ್ತೀನಿ ಅಂತ ಸಾರಿಸಿಬಿಟ್ಟ. ಆಗ ಜನರೆಲ್ಲ ಅಯ್ಯೋ ಈ ಪ್ರಪಂಚದಲ್ಲಿ ಹೂವು, ಹಣ್ಣು, ಚಿಗುರು ಬಿಡುವ ಮರವುಂಟು. ಎಲ್ಲಾದರೂ ಮುತ್ತಿನ ಬುಡ, ಚಿನ್ನದ ಗಿಡ, ಪಚ್ಚೆ ತೆನೆ ಇರುವಂಥಾ ಮರವುಂಟೇ? ಈ ರಾಜನಿಗೆ ಹುಚ್ಚು ಹಿಡಿದಿರುವುದೆಂದು ಮಾತಾಡಿಕೊಂಡರು. ಡಂಗೂರ ಹೊಡೆಸಿ ಎಷ್ಟು ದಿನವಾದರೂ ಯಾರೂ ಅರಮನೆಯತ್ತ ಮುಖ ಹಾಕಲಿಲ್ಲ. ಪಂಥವೊಡ್ಡಿ ವೀಳ್ಯ ಕೇಳಲಿಲ್ಲ. ಆಗ ರಾಜನು ಅಂಥಾ ವೃಕ್ಷ ಕಾಣದ ಮೇಲೆ ಇನ್ನೇನು ಅಂದು ಬೇಜಾರು ಮಾಡಿಕೊಂಡು ಅದೇ ಚಿನ್ನದ ಕಟ್ಟಿನ ಮಂಚದ ಮೇಲೆ ಮಕಾಡೆ ಮಲಗಿಬಿಟ್ಟ.

ರಾಜನ ಇಬ್ಬರು ಮಕ್ಕಳಾದಂಥ ರುದ್ರಗೊಮಾರ, ರೈತಗೊಮಾರರು ಬಂದು 'ಅಪ್ಪಾ ಚಿಂತೆ ಯಾಕೆ, ನಾವು ಹೋಗಿ ನೀನು ಕೇಳಿದಂಥ ವೃಕ್ಷವನ್ನು ತರುತ್ತೀವಿ' ಅಂದರು. ರಾಜ, ಮಕ್ಕಳೇ